# ಸಖತನ

ನಾವು ಕಟ್ಟಿಕೊಂಡ ಲೋಕದಲ್ಲಿ ಬದುಕುತ್ತಿದ್ದೇವೆ. ಅನೇಕರು ಈ ಬದುಕಿನಲ್ಲಿ ಬಂದು ಹೋಗುತ್ತಾರೆ. ತಂದೆತಾಯಿ ನಮ್ಮೊಡನೆ ಇರುವವರೇ. ಇನ್ನು ಬಂಧುಗಳು ಹಾಗೂ ಹೀಗೂ ಉಂಟೇ ಉಂಟು. ಇವರನ್ನು ಹೊರತು ಪಡಿಸಿದರೆ 'ಗೆಳೆಯ ಗೆಳತಿ, ಸಖಸಖಿ, ಮಿತ್ರ, ಒಡನಾಡಿ ಈ ಎಲ್ಲ ಹೆಸರುಗಳಿಂದ ಕರೆಸಿಕೊಳ್ಳುವವರು ನಮ್ಮೊಡನೆ ಬೆರೆತು ಬರುತ್ತಾರೆ. ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯು ಸ್ನೇಹಕ್ಕೆ ತುಂಬಾ ಪ್ರಾಧಾನ್ಯವನ್ನು ನೀಡಿದೆ. 'ಸ್ನೇಹದ ಪರಿಯ ನಾನೆಂತು ಹೇಳಲಿ?, ಎಂದು ಅರ್ಥ ಬರುವ ಹತ್ತಾರು ಕಾವ್ಯಗಳ ಸಾಲುಗಳನ್ನು ನಾವು ಗಮನಿಸಿದ್ದೇವೆ.

'ಈ ಸ್ನೇಹ ದೊರಕುವುದೇನು?' ಎಂಬಂತಹ ಪ್ರಶ್ನಾರ್ಥಕ ಉಕ್ತಿ ಪ್ರಪಂಚಕ್ಕೂ ನಮ್ಮಲ್ಲಿ ಕೊರತೆಯಿಲ್ಲ. ನಿಜ ಜೀವನದಲ್ಲಿ ಗೆಳೆಯನಿಗೆ ಗೆಳೆಯ, ಗೆಳತಿಗೆ ಗೆಳತಿ ಒಡನಾಡಿಯಾಗಿರುವ ಹತ್ತಾರು ನಿದರ್ಶನಗಳಿವೆ. ಜನಪದ ಸಾಹಿತ್ಯದಲ್ಲಿ ಗೆಳತಿಯ ಮಾತಿಗೆ ಮುಖ್ಯ ಅವಲಂಬನೆ ಉಂಟು. 'ಕೆರೆಗೆ ಹಾರ' ಎಂಬ ಪ್ರಸಿದ್ಧ ಕೋಲಾಟದ ಪದದಲ್ಲಿ ಭಾಗೀರಥಿಯು ಗೆಳತಿಯ ಬಳಿಗೆ ಹೋಗಿ 'ನನಗೆ ಕೆರೆಗೆ ಹಾರ ಕೊಡ್ತಾರಂತ' ಎಂದು ತನ್ನ ಮನದ ಇಂಗಿತವನ್ನು ಹೇಳುವುದು ಗೆಳತಿಯೊಬ್ಬಳಿಗೇ ಮಾತ್ರ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಕರ್ಣ—ದುರ್ಯೋಧನರ ಸಂಬಂಧ ತುಂಬಾ ಪ್ರಸಿದ್ಧವಾದುದೇ. ಭಾಗವತದಲ್ಲಿ ಬರುವ ಶ್ರೀಕೃಷ್ಣ ಕುಚೇಲರ ಸ್ನೇಹ ಲೋಕವಿಖ್ಯಾತವಾದುದೇ ಸರಿ. ಸ್ನೇಹವು ಪ್ರತಿಯೊಬ್ಬನ ಬದುಕಿನಲ್ಲೂ ಪುಣ್ಯದ ಪುಂಜವಾಗಿ ಬರುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುತಿನ, ತೀನಂಶ್ರೀ, ಎ.ಎನ್. ಮೂರ್ತಿರಾವ್ ಇಂಥ ಮಹನೀಯರ 'ಸ್ನೇಹಕಾರ್ತಿಕ' ನಮಗೆ ಎಂದಿಗೂ ದಾರಿದೀಪ. ಕನ್ನಡದ ಭೀಷ್ಮರಾದ ಡಿವಿಜಿ ಅವರು ಪ್ರೊ. ಟಿ. ಎಸ್. ವೆಂಕಣ್ಣಯ್ಯ ಮತ್ತು ಶ್ರೀಮೋಕ್ಷಗುಂಡಂ ಕೃಷ್ಣಮೂರ್ತಿ ಅವರಿಗೆ 'ಮಂಕುತಿಮ್ಮನ ಕಗ್ಗ'ವನ್ನು ಅರ್ಪಿಸುತ್ತ 'ವಿಧಿ ಏನು ಮಾಡಿದರೂ ಅದನ್ನು ಎದುರಿಸುವ ಕೆಳೆಯಾಸರೆ ನಮ್ಮಿಂದ ಸಾಧ್ಯವಾಯಿತು. ಅವನು ನನ್ನ ಬದುಕನ್ನು ಒಡೆದ. ಆದರೆ, ನನ್ನ ಎದೆಯಿಂದ ನಮ್ಮ ಸ್ನೇಹದ ನೆಳಲನ್ನು ಕೀಳಲು ಸಾಧ್ಯವೆ?' ಎಂದು ಪ್ರಶ್ನಿಸಿದ್ದಾರೆ.

ಸ್ನೇಹವು ಪರಸ್ಪರ ಉಳಿಯಬೇಕಾದರೆ ಸಮಾನ ಮನೋಧರ್ಮ, ಏಕರೂಪವಾದ ಜೀವನಶೈಲಿ, ಸಮಾನ ಆಸಕ್ತಿ ಮುಂತಾದವುಗಳು ಬೇಕಾಗುತ್ತವೆ. ಭಾವನಾ, ಕಲ್ಪನಾ ಮತ್ತು ಸಾಧನಾ ಈ ಮೂರು ಮುಪ್ಪುರಿಗೊಂಡು ಪರಸ್ಪರರ ಗೆಳೆತನ ಬೆರೆತುಕೊಂಡಿರಬೇಕಾಗುತ್ತದೆ. ಅಲ್ಲಿ ಸ್ವಾರ್ಥಕ್ಕೆ ಲವಲೇಶವೂ ಅವಕಾಶ ಇರುವುದಿಲ್ಲ. ಗೆಳೆತನದ ಬದುಕು 'ಹೃದಯ ಸಮುದ್ರ'ವಾಗಿರುತ್ತದೆ. ಸರ್ವಜ್ಞ ಕವಿಯು ಮಿತ್ರತ್ವದ ಗುಣಗಣಗಳನ್ನು ಬಿಡಿಬಿಡಿಯಾಗಿ ಬಿಡಿಸಿ ನೋಡಿದ್ದಾನೆ. ಕ್ಷಣಮಾತ್ರವಾದರೂ ಗುಣಿಗಳ ಜತೆ ಒಡನಾಡಬೇಕು. ಆದರೆ, ಗುಣಹೀನರ ಒಡನಾಟ ಬಹುದುಃಖವನ್ನು ತರುತ್ತದೆ. ಸ್ನೇಹವನ್ನು 'ತ್ರಿಕರಣ ಶುದ್ಧಿ' ಇರುವವರಲ್ಲಿ ಇಟ್ಟುಕೊಳ್ಳಬೇಕು. ಕಾಯಾವಾಚಾ ಮನಸಾ ಉಂಟಷ್ಟೆ? ಇದನ್ನು ಪ್ರಾಚೀನರು ತ್ರಿಕರಣ ಎಂದರು. ನಮ್ಮ ಬದುಕು ಈ ಮೂರರ ಅನುಸಂಧಾನದಲ್ಲಿ ಒಡಮೂಡಬೇಕು. ಇಂಥವರೊಡನೆ 'ಆವಗಂ ಸಖತನವು ಲೇಸು' ಎಂದು ಸರ್ವಜ್ಞ ಹೇಳುತ್ತಾನೆ. ಅದು ಇಲ್ಲದಿದ್ದರೆ 'ಅರಿಯದರ ಕೂಟ ಬರುಕೂಟ' ಎನ್ನುತ್ತಾನೆ. ತಿಳಿದವರ ಜತೆ ಬದುಕಬೇಕು. ಅದಿಲ್ಲದಿದ್ದರೆ ಕೂಟವೂ ವ್ಯರ್ಥ. ಇದು ತನ್ನನ್ನು ತಾನೇ ಇರಿದುಕೊಂಡಂತೆ. 'ಸಜ್ಜನರ ಸಂಗ ತಾ ಹೆಜ್ಜೇನ ಕೊಡದಂತೆ' ಎಂಬ ಅವನ ಮಾತು ಪ್ರಸಿದ್ಧವಾದುದು. ಹೆಜ್ಜೇನಿನ ಸಿಹಿ ಬಲ್ಲವರೇ ಬಲ್ಲರು. ಮಿತ್ರರು ಹೆಜ್ಜೇನಿನಂತೆ ಬದುಕಲ್ಲಿ ಬಂದು ಸೇರಬೇಕು ಅಷ್ಟೆ.

ಸಖತನ ಬದುಕಿಗೆ ಸಂತೋಷ ಹಾಗೂ ನೆಮ್ಮದಿಯನ್ನು ತಂದುಕೊಡುತ್ತದೆ. ಅಂಥ ಸ್ನೇಹದ ಪರಿ ಬದುಕಿಗೆ ಆನಂದೋತ್ಸಾಹವನ್ನು ಸದಾ ಕೊಡುತ್ತದೆ. ಆಧುನಿಕ ಪೂರ್ವ ಗ್ರಾಮೀಣ ಬದುಕಿನ ಕಥನಗಳಲ್ಲಿಯೂ ನಿಜಜೀವನದಲ್ಲಿಯೂ ಗೆಳೆತನದ ಪರಮಾವಧಿಯನ್ನು ಕಂಡಿದ್ದೇವೆ. ದ್ವೇಷವೂ ಸ್ನೇಹದಲ್ಲಿ ಮಾರ್ಪಾಡುಗೊಂಡಿರುವುದುಂಟು. ವ್ಯಕ್ತಿಯು ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ ಹೋರಾಡುತ್ತಾನೆ. ಅವನು ಈ ಮೂರರ ನೆಲೆಯ ಮೇಲೆ ಬದುಕು ನಿಂತಿದೆ ಎಂದು ಭಾವಿಸುತ್ತಾನೆ. ಆದರೆ, ಅದು ಕ್ಷಣಿಕ. ಅದಕ್ಕಿಂತ ಭಿನ್ನವಾದ ಸುಂದರ ಬದುಕುಂಟು. ಅದು ತನ್ನನ್ನು ಎತ್ತರಿಸಿ, ಮತ್ತೊಬ್ಬರನ್ನು ಉದ್ಧರಿಸಿ ನಿಲ್ಲಿಸುತ್ತದೆ. ಸ್ನೇಹ ಸ್ನೇಹದ ನಡುವೆ 'ಕರಣ'ಗಳು ಬರಬಾರದು. ಅದು ಬಂದರೆ ಜೀವನಕ್ಕೆ ಅರ್ಥ ಇರುವುದಿಲ್ಲ. ಸಂಬಂಧಗಳು ಸ್ನೇಹಪೂರ್ಣವಾಗಿರಬೇಕಾದರೆ, ಅಲ್ಲಿ ಪಾರದರ್ಶಕ ನೆಲೆಸುಗಳು ಹೊಂದಿಕೊಂಡು ಇರಬೇಕು. ಅದು ಜೀವನದೃಷ್ಟಿ; ಅದುವೇ ಸ್ನೇಹದೃಷ್ಟಿ.

ಅದು ಬಾಳ್ವೆಗೆ ಉಲ್ಲಾಸ, ಸಂಭ್ರಮ, ಸಂತೋಷ ಮತ್ತು ಆನಂದದ ಸಮಸ್ತ ಅನುಭೂತಿಯನ್ನು ತಂದುಕೊಡುತ್ತದೆ. ಸ್ನೇಹಕ್ಕೆ ಬೇಕಾಗುವುದು ಶುದ್ಧ 'ಅನುಭೂತಿ' ಮಾತ್ರ. ಅದಿಲ್ಲದಿದ್ದರೆ ಸ್ನೇಹ ಬೆಳೆಯಲಾರದು, ಉಳಿಯಲಾರದು. ಸ್ನೇಹ ಎಂಬುದು ಈಗಿನ ವ್ಯಾವಹಾರಿಕ ಪ್ರಪಂಚದಲ್ಲಿ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಮನುಷ್ಯನ ಬದುಕು ಯಾಂತ್ರಿಕವಾಗುತ್ತಿದೆ. ಸ್ನೇಹವು ಕೃತಕ ಗೋಡೆಯ ಮೇಲೆ ನಿಲ್ಲುವುದಿಲ್ಲ. ಅದು ಸಹಜವಾದುದು. ಭಾವಗಳೇ ವಿಕಲ್ಪಗಳಾಗುತ್ತಿರುವಾಗ 'ಸ್ನೇಹಕಾರ್ತಿಕ'ಕ್ಕೆ ಬೆಲೆ ಬರುವುದಾದರೂ ಹೇಗೆ? ಸ್ನೇಹಕ್ಕೆ ಬೇಕಾದುದು 'ನಿರ್ಮಲತೇಜ' ಮಾತ್ರ. ನಮ್ಮ ಆಧುನಿಕ ಜೀವನಶೈಲಿ ಇದಕ್ಕೆ ಅವಕಾಶವನ್ನು ನೀಡುತ್ತಿಲ್ಲ. ಹುಸಿಟೊಳ್ಳಿನ ಮೇಲೆ ಎಷ್ಟು ದಿನ ಬದುಕನ್ನು ದೂಡಬಹುದು? ಭಾವ ಪ್ರಪಂಚವಿಲ್ಲದೇ ವ್ಯವಹಾರ ಪ್ರಪಂಚದಲ್ಲೇ ಎಷ್ಟು ದಿನ ಸ್ನೇಹವನ್ನು ಇಟ್ಟುಕೊಳ್ಳಲು ಸಾಧ್ಯ? ಈ ಪ್ರಶ್ನೆಗಳಿಗೆ ನಾವು ಉತ್ತರ ಹುಡುಕಿಕೊಳ್ಳಬೇಕಾಗಿದೆ.

■ **ಪುರಂಜೀವಿ**


ಯುಗಾದಿ ವಿಶೇಷಾಂಕ 2019

ನನ್ನ ಅಧ್ಯಾತ್ಮ

ನಮ್ಮ ಹೆಮ್ಮೆಯ ಬರಹಗಾರರು ವಿಲ್ಸನ್ ಕಟೀಲ್, ಡಿ. ಸತ್ಯಪ್ರಕಾಶ್, ಎಂ.ಡಿ. ಪಲ್ಲವಿ, ನಂದಿನಿ ಹೆದ್ದುರ್ಗ, ಸತ್ಯಮಂಗಲ ಮಹಾದೇವ, ಹರೀಶ ಹಾಗಲವಾಡಿ, ಚೈತ್ರಾ ಕೋಟೂರ್, ನಾಗರಾಜ್ ಹೆತ್ತೂರು, ನಿವೇದಿತಾ, ಕಿರಣ್ ಮಂಜುನಾಥ್

ಇದೀಗ ಮಾರುಕಟ್ಟೆಯಲ್ಲಿ


## ಮಾತೇ ಮುತ್ತು

- ಭಾಷೆಗಳು ಬೆಳೆಯುವುದೆಂದರೆ 'ಭಾವನೆ'ಗಳು ಬೆಳೆಯುವುದೆಂದೇ.

  —ಟಿ.ಎಸ್. ಎಲಿಯಟ್

- ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡದಿದ್ದರೆ, ಆ ಮಕ್ಕಳನ್ನು ನೀವು ಕಳೆದುಕೊಂಡಂತೆಯೇ.

  —ಜಾನ್ ಎಫ್. ಕೆನಡಿ

- ಹೊಸತನವೆ ಬಾಳು, ಹಳಸಿಕೆ ಎಲ್ಲ ಸಾವು ಬಿಡು.

  —ಡಿವಿಜಿ

- ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು.

  —ದ.ರಾ. ಬೇಂದ್ರೆ

- ಆಡಿದ ನಂತರ ಮಾತು ನಿನ್ನನ್ನು ಆಳುತ್ತದೆ. ಆಡುವ ಮೊದಲು ನೀನೇ ಅದನ್ನು ಆಳುವೆ.

  —ಅರಬ್ ಗಾದೆ

- ಸಾಮಾನ್ಯ ಜನರು ಅಪರಾಧ ಮಾಡದೇ ಇರುವುದು ಶಿಕ್ಷೆಯ ಭಯದಿಂದಲೇ ಹೊರತು ಅದು ಕೆಟ್ಟದು ಎಂದಲ್ಲ.

  —ಅರಿಸ್ಟಾಟಲ್